ಅನುಬಂಧ-I ಚುಕ್ಕೆ ಗುರುತಿನ ಪ್ರಶ್ನೋತ್ತರಗಳು ದಿನಾಂಕ : 31-1-2005

61 (1462) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು – ಮೈಸೂರು ಕಾರಿಡಾರ್ ಎಕ್ಸ್‌ಪ್ರೆಸ್ ಕಾಮಗಾರಿ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು.

ಆ) ಸದರಿಯೋಜನೆಯ ರೂಪುರೇಷೆಗಳೇನು?

ಇ) ಈ ಯೋಜನೆಯನ್ನು ಜಾರಿಗೊಳಿಸಲು ಮಾಡಿಕೊಂಡಿರುವ ಕರಾರುಗಳೇನು?

ಈ) ಯೋಜನೆಗೆ ರೈತರಿಂದ ಪಡೆಯುವ ಜಮೀನಿನ ನೋಂದಣಿ ಕೆಲಸವನ್ನು ಎಲ್ಲಿ ಮಾಡಬೇಕೆಂದು ತೀರ್ಮಾನವಾಗಿದೆ.

ಉ) ಈ ತೀರ್ಮಾನವನ್ನು ಬದಲಾಯಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು ಮೈಸೂರು ಕಾರಿಡಾರ್ ಎಕ್ಸ್‌ಪ್ರೆಸ್ ಯೋಜನೆಯ 41 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ ಹಾಗೂ 9.1 ಕಿ.ಮೀ ಲಿಂಕ್ ರಸ್ತೆಯ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳನ್ನು ದಿನಾಂಕ 05.02.2004 ರಂದು ಪ್ರಾರಂಭಿಸಲಾಯಿತು.

ಆ) ಸದರಿ ಯೋಜನೆಯ ರಸ್ತೆಯು ಒಟ್ಟಾರೆ 111 ಕಿ.ಮೀ ಉದ್ದದ ವೇಗದ ಹೆದ್ದಾರಿ, 41 ಕಿ.ಮೀ ಉದ್ದದ ಹೊರ ವರ್ತುಲ ರಸ್ತೆ 9.1 ಕಿ.ಮೀ ಉದ್ದದ ಲಿಂಕ್ ರಸ್ತೆ, 3.1 ಕಿ.ಮೀ. ಉದ್ದ ಮೇಲು ರಸ್ತೆ ಹಾಗೂ ಅದಕ್ಕೆ ತತ್ಸಂಬಂಧವಾದ ಒಟ್ಟಾರೆ ಯೋಜನೆಯಲ್ಲಿ ಒಟ್ಟಾರೆ 16 ಇಂಟರ್‌ಚೇಂಜ್‌ಗಳನ್ನು ಒಳಗೊಂಡಿರುತ್ತದೆ. ಹಾಗೂ ಯೋಜನೆಯಲ್ಲಿ ಒಟ್ಟಾರೆ 5 ಉಪನಗರಗಳನ್ನು ಒಳಗೊಂಡಂತೆ ಸುಮಾರು 400 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕ, ನೀರು ಸಂಸ್ಕರಣಾ ಘಟಕ, ದೂರವಾಣಿ ಸಂಪರ್ಕ ಹಾಗೂ ಇತರೆ ಮೂಲ ಸೌಲಭ್ಯ ಯೋಜನೆಗಳನ್ನೊಳಗೊಂಡಿವೆ.

ಇ) ದಿನಾಂಕ 20.02.1995ರಂದು ಸರ್ಕಾರವು ಭಾರತೀಯಮೂಲದ ಕಲ್ಯಾಣಿ ಗ್ರೂಪ್ ಸಂಸ್ಥೆ ಹಾಗೂ ಅಮೇರಿಕ ಮೂಲದ SAB ಮತ್ತು VHB ಕಪನಿಗಳೊಂದಿಗೆ ಪರಸ್ಪರ ತಿಳುವಳಿ ಪತ್ರಕ್ಕೆ (MOU) ಪರಸ್ಪರ ಸಹಿ ಮಾಡಿದೆ. ಹಾಗೂ ಮುಂದುವರೆದಂತೆ ದಿನಾಂಕ: 03.04.1997 ರಂದು ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (NICEL) ಕಂಪನಿಯೊಂದಿಗೆ ಸರ್ಕಾರವು ಫ್ರೇಮ್‌ವರ್ಕ್ ಕರಾರು ಒಪ್ಪಂದಕ್ಕೆ ಪರಸ್ಪರ ಒಪ್ಪಿ ಕರಾರಿಗೆ ಸಹಿ ಮಾಡಲಾಗಿದೆ.

ಈ) ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಖಾಸಗಿ ಜಮೀನನ್ನು ರೈತರಿಂದ ಪಡೆಯುವ ಜಮೀನುಗಳಿಗೆ ಸಂಬಂಧಿಸಿದಂತೆ ಆಯಾಯಾ ಉಪ ನೋಂದಣಿ ಅಧಿಕಾರಿಗಳ ಪ್ರದೇಶದ ವ್ಯಾಪ್ತಿಯಲ್ಲಿ ಕಾನೂನು ರೀತಿಯ ನೋಂದಣಿ ಮಾಡಲಾಗುತ್ತದೆ.

ಉ) ಇಲ್ಲ.

63 (1451) ಶ್ರೀ ನೆ.ಲ.ನರೇಂದ್ರ ಬಾಬು (ರಾಜಾಜಿನಗರ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು?; ಈಗಾಗಲೇ ಎಷ್ಟು ಕೇಂದ್ರಗಳನ್ನು ಮುಚ್ಚಲಾಗಿದೆ; ಇದರಲ್ಲಿ ಎಷ್ಟು ಜನರು ನೋಂದಾಯಿಸಿದ್ದಾರೆ (ಅಂಕಿ ಅಂಶಗಳ ವಿವರ ನೀಡುವುದು).